ಖಾಯಂಗೊಳಿಸುವ ಪ್ರಸ್ತಾವನೆಯನ್ನು ಅರ್ಹತೆಯ ಆಧಾರದ ಮೇಲೆ ಪರಿಶೀಲಿಸಲಾಗುವುದು.

ಆ) ಉದ್ಭವಿಸುವುದಿಲ್ಲ.

ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಸಿಬ್ಬಂದಿ ವಿವರ

410 : (326)

ಶ್ರೀ ಕೆ.ಜಿ.ಕುಮಾರಸ್ವಾಮಿ (ಶಿವಮೊಗ್ಗ ಗ್ರಾಮಾಂತರ)

ಅ) ಶಿವಮೊಗ್ಗ ತಾಲ್ಲೂಕು, ಉರಗಡೂರುನಲ್ಲಿ ಸಾರ್ವಜನಿಕ ನಿವೇಶನ ಹಂಚಲು ಭೂಸ್ವಾಧೀನಪಡಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು; ನಿವೇಶನ ಕೋರಿ ಬಂದ ಅರ್ಜಿಗಳೆಷ್ಟು; ಆ ಪೈಕಿ ಇವರುಗಳಿಗೆ ನಿವೇಶನ ಹಂಚಲು ಯಾವ ಕ್ರಮ ಕೈಗೊಳ್ಳಲಾಗಿದೆ;

ಆ) ಸಾರ್ವಜನಿಕರಿಂದ ನಿವೇಶನಕ್ಕಾಗಿ ಕಟ್ಟಿದ ಹಣವೆಷ್ಟು; ಈ ಹಣವನ್ನು ಏನು ಮಾಡಲಾಗಿದೆ; ಈ ಜಮೀನು ಪ್ರಾಧಿಕಾರದ ವಶದಲ್ಲಿದ್ದರೂ ನಿವೇಶನ ಹಂಚಲು ಕ್ರಮಕೈಗೊಳ್ಳದಿರಲು ಕಾರಣವೇನು;

ಇ) 2011–12ನೇ ಸಾಲಿನಲ್ಲಿ ಸಾರ್ವಜನಿಕ ಅಭಿವೃದ್ಧಿಗಾಗಿ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ವೆಚ್ಚ ಮಾಡಲಾಗಿದ ಹಣವೆಷ್ಟು; ಈ ರೀತಿ ವೆಚ್ಚ ಮಾಡಲು ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆಯೇ ಅಥವಾ ಪ್ರಾಧಿಕಾರದ ನಿಯಮಾವಳಿಯಲ್ಲಿ ಅವಕಾಶವಿದೆಯೇ; (ನಿರ್ವಹಿಸಿದ ಕಾಮಗಾರಿಗಳ ವೆಚ್ಚದ ವಿವರವಾದ ಮಾಹಿತಿ ನೀಡುವುದು);

ಈ) ರಾಜ್ಯದಲ್ಲಿ ಇರುವ ನಗರಾಭಿವೃದ್ಧಿ ಪ್ರಾಧಿಕಾರಗಳೆಷ್ಟು; ಈ ಪ್ರಾಧಿಕಾರಗಳಲ್ಲಿ ಸರ್ಕಾರದ ಮಂಜೂರಾತಿ ಹೊಂದಿದ ಸಿಬ್ಬಂದಿ ಎಷ್ಟು (ದರ್ಜೆವಾರು ವಿವರ ನೀಡುವುದು) ಪ್ರಾಧಿಕಾರ ಸಿಬ್ಬಂದಿಯನ್ನು ಯಾವ ನೇಮಕಾತಿ ನಿಯಮಗಳಡಿ ನೇಮಕ ಮಾಡಿ ಕ್ರಮಬದ್ಧಗೊಳಿಸಲಾಗಿದೆ;

ಉ) ಈ ಪ್ರಾಧಿಕಾರಗಳ ಸಿಬ್ಬಂದಿಯನ್ನು ರಾಜ್ಯಾದ್ಯಂತ ಏಕರೂಪವಾಗಿ ನಿಯಂತ್ರಿಸಲು ವ್ಯಂದ ಮತ್ತು ನೇಮಕಾತಿ ರಚಿಸಲು ಕ್ರಮ ಕೈಗೊಳ್ಳಲಾಗುವುದೇ; ಕೆಲವು ಪ್ರಾಧಿಕಾರವು ಸಿಬ್ಬಂದಿಗಳು ಒಂದೆ ಕಡೆ ಹಲವು

ವರ್ಷಗಳಿಂದಿದ್ದು ರಿಯಲ್ ಎಸ್ಟೇಟ್ ದಂದೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಕಡಿವಾಣ ಹಾಕಲು ಸರ್ಕಾರಿ ನೌಕರರ ವರ್ಗಾವಣೆ ನೀತಿಯನ್ನು ಈ ಪ್ರಾಧಿಕಾರದ ಸಿಬ್ಬಂದಿಗೂ ಅನುಸರಿಸಿ ಪ್ರಾಧಿಕಾರ ಆಡಳಿತದಲ್ಲಿ ಪಾರದರ್ಶಕ ಅನುಸರಿಸಲು ಕ್ರಮ ಕೈಗೊಳ್ಳಲಾಗು-ವುದೇ?

ಶ್ರೀ ಎಸ್.ಸುರೇಶ್‌ಕುಮಾರ್ (ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು, ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು)

ಅ) ಶಿವಮೊಗ್ಗ ತಾಲ್ಲೂಕು, ಊರಗಡೂರು ಗ್ರಾಮದಲ್ಲಿ ಒಟ್ಟು 69 ಎಕರೆ 19 ಗುಂಟೆ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಬಡಾವಣೆಗೆ 1999ರಲ್ಲಿ ಸಾರ್ವಜನಿಕರಿಂದ ನಿವೇಶನಕ್ಕಾಗಿ ಅರ್ಜಿಯನ್ನು ಅಹ್ವಾನಿಸಿದ್ದು, 4255 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಸದರಿ ಜಮೀನುಗಳಲ್ಲಿ ಅಭಿವೃದ್ಧಿ ಕಾರ್ಯಕೈಗೊಳ್ಳಲು ಪ್ರಾರಂಭಿಸಿದ ಸಂದರ್ಭದಲ್ಲಿ ಭೂ ಮಾಲೀಕರು ಅಡ್ಡಿಪಡಿಸಿರುತ್ತಾರೆ. ಮುಂದುವರೆದು, ನ್ಯಾಯಾಲಯಗಳಲ್ಲಿ ಹಲವಾರು ಹಂತಗಳಲ್ಲಿ ಪ್ರಕರಣ ದಾಖಲಾಗಿದ್ದು, ಕೆಲವು ಬಾರಿ ನ್ಯಾಯಾಲಯವು ಕೂಡ ತಡೆಯಾಜ್ಞೆ ನೀಡಿರುತ್ತದೆ. ಈ ಕಾರಣಗಳಿಂದಾಗಿ ಬಡಾವಣೆ ಅಭಿವೃದ್ಧಿಪಡಿಸಿರುವುದಿಲ್ಲ. ಆದ್ದರಿಂದ, ಈ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಮಾಡಿರುವುದಿಲ್ಲ.

ಆ) ಸಾರ್ವಜನಿಕರಿಂದ ನಿವೇಶನಕ್ಕಾಗಿ ಕಟ್ಟಿದ ಹಣ ರೂ.50,31,958/- ಆಗಿರುತ್ತದೆ. ಈ ಹಣವನ್ನು ಪ್ರಾಧಿಕಾರದ ಖಾತೆಗೆ ಜಮಾ ಮಾಡಲಾಗಿರುತ್ತದೆ. ನಿವೇಶನ ಹಂಚಿಕೆ ವಿಷಯದಲ್ಲಿ ಮೇಲೆ ಕಂಡಿಕೆ (ಅ) ನಲ್ಲಿ ಉತ್ತರಿಸಲಾಗಿದೆ.

ಇ) ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಾರ್ವಜನಿಕ ಉದ್ದೇಶಕ್ಕಾಗಿ 2011-12ನೇ ಸಾಲಿನಲ್ಲಿ ರೂ. 2,29,26,000/- ಗಳನ್ನು ವೆಚ್ಚ ಮಾಡಲಾಗಿದೆ. ಈ ಕಾಮಗಾರಿಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 10 ಹಾಗೂ

14ರನ್ವಯ ಕೈಗೊಳ್ಳಲಾಗಿದ್ದು ಕೆಲವು ಕಾಮಗಾರಿಗೆ ಸರ್ಕಾರದಿಂದ ಅನುಮೋದನೆ ಪಡೆದುಕೊಳ್ಳಲಾಗಿದೆ. ನಿರ್ವಹಿಸಿದ ಕಾಮಗಾರಿಗಳು ಮತ್ತು ಅದರ ವೆಚ್ಚವನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಈ) ರಾಜ್ಯದಲ್ಲಿ ಒಟ್ಟು 28 ನಗರಾಭಿವೃದ್ಧಿ ಪ್ರಾಧಿಕಾರಗಳು ಇವೆ. (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಹೊರತುಪಡಿಸಿ) ಪ್ರಾಧಿಕಾರಗಳಲ್ಲಿ ಸರ್ಕಾರದಿಂದ ಮಂಜೂರಾತಿ ಹೊಂದಿದ ಸಿಬ್ಬಂದಿಯ ವಿವರ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ದರ್ಜೆ	ಒಟ್ಟು ಹುದ್ದೆಗಳು
1	'ಎ' ದರ್ಜೆ	84
2	'ಬಿ' ದರ್ಜೆ	76
3	'ಸಿ' ದರ್ಜೆ	365
4	'ಡಿ' ದರ್ಜೆ	276

ಪ್ರಾಧಿಕಾರದ ಸಿಬ್ಬಂದಿಯನ್ನು ಸಂಬಂಧಪಟ್ಟ ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮದಡಿ ನೇಮಕ ಮಾಡಿ ಕ್ರಮ ಬದ್ಧಗೊಳಿಸಲಾಗುತ್ತದೆ.

ಉ) ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಏಕರೂಪ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿದೆ. ಕೆಲವು ಪ್ರಾಧಿಕಾರದ ಸಿಬ್ಬಂದಿಗಳು ರಿಯಲ್ ಎಸ್ಟೇಟ್ ದಂದೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಊ) ಉ ಪ್ರಶ್ನೆಗೆ ಉತ್ತರಿಸಿದಂತೆ ಅನ್ವಯಿಸುವುದಿಲ್ಲ.

ಅನುಬಂಧ – 1

ವಿಧಾನ ಸಭೆಯ ಸದಸ್ಯರಾದ ಶ್ರೀ ಕೆ.ಜಿ.ಕುಮಾರಸ್ವಾಮಿರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 326 (ಸಾರ್ವಜನಿಕ ಉದ್ದೇಶಕ್ಕಾಗಿ 2011–12ನೇ ಸಾಲಿನಲ್ಲಿ ನಿರ್ವಹಿಸಿರುವ ಕಾಮಗಾರಿಗಳ ವಿವರ)

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಎಸ್.ಆರ್.ದರಕ್ಕಿಂತ ಶೇಕಡಾವರು ಹೆಚ್ಚುವರಿ ಅಥವಾ ಕಡಿಮೆ	ಪ್ರಾಧಿಕಾರದ ಸಭೆಯ ನಿರ್ಣಯದ ದಿನಾಂಕ
1	ಶಿವಮೊಗ್ಗ ನಗರದ ವಿನೋಬನಗರ ಪೊಲೀಸ್ ಚೌಕಿ (ಭಗತ್ ಸಿಂಗ್) ವೃತ್ತಕ್ಕೆ ಟ್ರಾಫಿಕ್ ಸಿಗ್ನಲ್ ಲೈಟ್‌ಗಳನ್ನು ಅಳವಡಿಸುವುದು.	18.08	ಕಡಿಮೆ ಕೊಟೇಷನ್ ದರಕ್ಕೆ	17–06–2011
2	ಗೋಪಾಲ ಗೌಡ ಬಡಾವಣೆಯ 2ನೇ ಹಂತದ ಸೇವಾ ರಸ್ತೆಯ ಬಲ ಭಾಗದಲ್ಲಿ ಹಾಗೂ ಶಾಂತೆಮ್ಮ ಲೇಔಟ್‌ನ ಮುಖ್ಯರಸ್ತೆಯ ಬಲಭಾಗದಲ್ಲಿ ಕಾಂಕ್ರಿಟ್ ಬೌಕ್ ಚರಂಡಿ ಮತ್ತು ಆರ್.ಸಿ.ಸಿ. ಡೆಕ್ ಸ್ಲ್ಯಾಬ್‌ಗಳನ್ನು ನಿರ್ಮಾಣ ಮಾಡುವ ಕಾಮಗಾರಿ	10.00	12.00 ಹೆಚ್ಚುವರಿ	17–06–2011

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಎಸ್.ಆರ್.ದರಕ್ಕಿಂತ ಶೇಕಡಾವರು ಹೆಚ್ಚುವರಿ ಅಥವಾ ಕಡಿಮೆ	ಪ್ರಾಧಿಕಾರದ ಸಭೆಯ ನಿರ್ಣಯದ ದಿನಾಂಕ
3	ಶಾಂತಮ್ಮ ಲೇಔಟ್‌ನ 2,3 ಮತ್ತು 4ನೇ ಅಡರಸ್ತೆಗಳಿಗೆ ಜಲ್ಲಿ ಬಿಜಾವಣೆ ಹಾಗೂ 3ನೇ ಕ್ರಾಸ್‌ನಲ್ಲಿ ಕಾಂಕ್ರಿಟ್ ಬಾಕ್ಸ್ ಚರಂಡಿ ನಿರ್ಮಾಣ ಮತ್ತು ಶರಾವತಿನಗರ ಚಾನಲ್ ಏರಿಯಾ ಎಡ ಭಾಗದ ರಸ್ತೆಗೆ ಜಲ್ಲಿ ಬಿಜಾವಣೆ ಮಾಡುವ ಕಾಮಗಾರಿ.	10.00	12.00 ಹೆಚ್ಚುವರಿ	17–06–2011
4	ಅಟಲ್ ಬಿಹಾರಿ ವಾಜಪೇಯಿ ಮಲ್ಲೀಗೇನಹಳ್ಳಿ ವಸತಿ ಬಡಾವಣೆಯಲ್ಲಿ ಮಲ್ಲೀಗೇನಹಳ್ಳಿ ಸರ್ವೆ ನಂ.59ರ ಪೈಕಿ 01 ಎಕರೆ 06ಗುಂಟೆ ಸರ್ಕಾರಿ ಜಾಗಕ್ಕೆ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸುವುದು.	8.70	12.00 ಹೆಚ್ಚುವರಿ	17–06–2011

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಎಸ್.ಆರ್.ದರಕ್ಕಿಂತ ಶೇಕಡಾವರು ಹೆಚ್ಚುವರಿ ಅಥವಾ ಕಡಿಮೆ	ಪ್ರಾಧಿಕಾರದ ಸಭೆಯ ನಿರ್ಣಯದ ದಿನಾಂಕ
5	ಶಿವಮೊಗ್ಗ ನಗರದ ಗೋಪಾಲಗೌಡ ಬಡಾವಣೆಯ "ಸಿ" ಬ್ಲಾಕ್ ಕೊನೆಯ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ 206ರ ಸೇತುವೆಯಿಂದ ಆಟೋ ಕಾಂಪ್ಲೆಕ್ಸ್ ಕಡೆಗೆ ಮಳೆನೀರು ಚರಂಡಿ ನಿರ್ಮಾಣ ಮಾಡುವುದು.	173.98	21.00 ಹೆಚ್ಚುವರಿ (ಈ ಕಾಮಗಾರಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ/ತಾಂತ್ರಿಕ ಮಂಜೂರಾತಿ ಮತ್ತು ಟೆಂಡರ್ ಅನುಮೋದನೆಯನ್ನು ಪಡೆದು ಕೈಗೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ).	15–10–2011
6	ಶಿವಮೊಗ್ಗ ನಗರದ ಹೊಸಮನೆ ಬಡಾವಣೆಯಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡದ ದುರಸ್ಥಿ ಕಾಮಗಾರಿ.	8.50	11.00 ಹೆಚ್ಚುವರಿ	9–04–2012